ಚೂರು ಹೇಳೇ ಅದು ಹೇಗೆ ಅಂತಾ?" ಅಂತಕ್ಕನ ದನಿಯಲ್ಲಿ ಬೆರಗಿರುತ್ತಿತ್ತು. "ಹೇಗೆ ಅಂದರೆ?... ನಿಮ್ಗಾದ್ರೆ ನೂರೆಂಟು ಮಂಡೆಬಿಸಿ. ಪೆಟ್ಟಿಗೆಯಲ್ಲಿಟ್ಟ ಅಡ್ಡಿಕೆ, ಕಾಸಿನ ಸರ, ಮಲ್ಲಿಗೆಸರ ಕಳ್ಳ ಬಂದು ಹೊತ್ಕೊಂಡೋದ್ರೆ ಅನ್ನೋ ಭಯ. ನಂಗೆ ಕುತ್ತಿಗೆಯಲ್ಲಿ ಇಕ್ಕಳ್ಳಿ ಇದೊಂದು ಕಪ್ಪುದಾರ. ಆಮೇಲೆ ನಿಮ್ಮ ಹಾಗೆ ಬೊಂಬಾಯ್ಗೆ ಹೋದ ಯಜಮಾನರು ಯಾವ ರಂಭೆ ಹಿಂದೆ ಹೋಗ್ತಾರೋ ಅಂತ ಸಂಶಯ ಸ ಪಡ್ಬೇಕಾಗಿಲ್ಲ, ಅದರಲ್ಲೂ ನಾನು ಬಚಾವ್. ಇರುವುದೊಂದು ಪೊಡಿಬಾಲೆ. ಕಲ್ಲುರ್ಟಿ ಅಪ್ಪೆ ಕೈಕಾಲಿಗೆ ತ್ರಾಣ ಕೊಟ್ಟರೆ ಅದನ್ನೊಂದು ನೇರ್ಪದ ದಾರಿಗೆ ತಂದೇನೆಂಬ ವಿಶ್ವಾಸವೂ ಉಂಟು. ಮತ್ತೆ ಯಾಕೆ ನಿದ್ದೆಗೆಡಬೇಕು ನಾನು?" ಕುಶಾಲಿಗೆ ಆರಂಭವಾದ ಮಾತುಗಳು ಕೊನೆ ಕೊನೆಗೆ ನೋವಿನಿಂದ ಭಾರವಾಗುತ್ತಿದ್ದಂತೆ ಅಂತಕ್ಕ ಮಾತು ಬದಲಾಯಿಸುತ್ತಿದ್ದರು. "ಓಯ್ ಹೇಳ್ಲಿಕ್ಕೆ ಮರೆತೆನೆ... ಇವತ್ತು ಆ ಕರ್ಬೊಳ್ಳೆಯನ್ನು ಮೇಯಲು ಬಿಡಬೇಡ. ಅಂಗಾರ ಒಂದು ಕೋಳಿ ಬೇಕೆಂದು ಹೇಳಿದ್ದ ನೋಡು... ಮಿಜಾರು ಕೋಳಿ ಕಟ್ಟ ಹತ್ರ ಬಂತು ಕಾಣ್ತದೆ." ಎಷ್ಟೊಂದು ಅಂತಃಕರಣದ ಹೆಂಗಸು ಅಂತಕ್ಕ... ಆ ಸ್ವಭಾವಕ್ಕೆ ತಕ್ಕ ಹಾಗೇ ಒಂದು ದಿನ ನರಳಲಿಲ್ಲ, ಹೊರಳಲಿಲ್ಲ. ಮಲಗಿದವರು ನಿದ್ದೆಯಲ್ಲೇ ಎದ್ದು ನಡೆದಿದ್ದರು. ಸಾಯುವ ವಯಸ್ಸಾಗಿರಲಿಲ್ಲ. ಆದರೂ, ಅಂತಹ ಸುಖ ಮರಣ ಎಂದಾದರೆ ಈಗಲೇ ಸತ್ತೇನು ಅಂದುಕೊಂಡಳು ಅಕ್ಕು ಪೂಜಾರ್ತಿ.

ಹೊರಗೆ ಮಧ್ಯಾಹ್ನದ ಬಿರುಬಿಸಿಲು ಸುರಿಯುತ್ತಿದ್ದರೂ, ಅಂಗಳದಲ್ಲಿ ಶೀಟ್ ಹಾಕಿದ್ದರಿಂದ ಸಿಟೌಟ್‌ನಲ್ಲಿ ನೆರಳಿತ್ತು. ಈಸಿಚೇರಿಗೆ ಮೈಯ್ಯೊರಗಿಸುತ್ತಿದ್ದಂತೆ ಗೇಟಿನ ಶಬ್ದವೂ, ರೋಕಿಯ ಬೊಗಳುವಿಕೆಯೂ ಒಟ್ಟಿಗೆ ಕೇಳಿತು. "ಏ ರೋಕಿ... ನಿಲ್ಲಾ... ನಿಲ್ಲಾ" ಎನ್ನುತ್ತಾ ಅಂಗಳಕ್ಕೆ ಕಾಲಿಟ್ಟವಳನ್ನು ನೋಡಿ, "ಓಯ್... ಮಾಂಕು... ಬಾಯಲ್ಲಿ ಏನಾದ್ರೂ ಇದ್ದರೆ ಅಲ್ಲೇ ತೆಂಗಿನ ಬುಡಕ್ಕೆ ಉಗಿದು ಈಚೆ ಬಾ ಮಾರಾಯ್ತಿ" ಎಂದಳು. ತಲೆಯ ಮೇಲೆ ಎಳೆದಿದ್ದ ಸೀರೆಯ ಸೆರಗನ್ನು ಜಾರಿಸಿ ಕತ್ತನ್ನು ಉಜ್ಜಿಕೊಂಡ ಮಾಂಕು ಮೂಲ್ಯೇದಿ, "ಉಗೀಲಿಕ್ಕೆ ಎಂತ ಉಂಟು ಅಕ್ಕೂ ಅಕ್ಕ ಮಣ್ಣು?... ಬಾಯಿ ಚಪ್ಪೆ ಆಗಿ ಕಡೀತಿದೆ ಇಲ್ಲಿ" ಎಂದಳು. "ಹಾಗಲ್ಲನೇ... ನೀನು ಆವತ್ತು ಬಂದವಳು ಅಂಗಳದಲ್ಲಿಡೀ ರಂಗೋಲಿ ಹಾಕಿ ಹೋದದ್ದನ್ನು ಬೆಳಗ್ಗೆ ತೋಳೀವಾಗ ಆ ಸುಮ ಕಂಡಾಪಟ್ಟೆ ಬೈತಿದ್ಲು ಮಾರಾಯ್ತಿ." "ಹೂಂ... ಕೆಲಸದವರನ್ನು ಅಟ್ಟದಲ್ಲಿಟ್ರೇ ಇನ್ನೇನು ಮತ್ತೆ?... ನೀವಂತೂ ಅವಳಿಗೆ ಹೆದರಿ ಎಲೆ ಬಾಯಿಗೆ ಹಾಕುವುದನ್ನೇ ಬಿಟ್ರಿ" ಮಾಂಕು ಮೂಲ್ಯೇದಿ ಸಿಟೌಟಿನಲ್ಲಿ ಕುಂಡೆಯೂರಿದಳು. "ಹೆದರಿಕೆ ಯಾರದ್ದು ಮಾರಾಯ್ತಿ?... ಅಮ್ಮ ನೀನು ಬೇಕಾದಲ್ಲಿ ಉಗುಳು... ಬೇಕಿದ್ದರೆ ಪೈಪ್ ಹಿಡಿದ್ರೆ ಆಯ್ತು... ಅಂತ ರಮೇಶನೂ, ಮಾಲಿಯೂ ಹೇಳ್ತಲೇ ಇರ್ತಾರೆ. ಯಾಕೋ ಇಷ್ಟು ಚಂದದ ಅಂಗಳ ನೋಡುವಾಗ ಉಗುಳಲಿಕ್ಕೆ ಮನಸ್ಸೇ ಬರುವುದಿಲ್ಲ. ಅದರ ಮೇಲೆ ರಮೇಶ ಕಂಚಿನ ಪಡ್ಶ ಕೂಡ ತಂದಿಟ್ಟಿದ್ದಾನೆ ಉಗುಳಲಿಕ್ಕೆ. ನಂಗೆ ಯಾಕೋ ಎಂತ ಬೇಡ ಆಗಿದೆ ಮಾರಾಯ್ತಿ." "ನಿಮ್ಮದು ಒಳ್ಳೆ ಸಂಗತಿ ಮಾರಾಯ್ರೇ... ಆವತ್ತು ಕೆಲಸಕ್ಕೆ ಹೋಗುವಾಗ ಅಂತಕ್ಕ ಶೆಡ್ತಿ ಹೊಟ್ಟೆಗೆ ಕೊಡದಿದ್ರೂ ಚಿಂತಿಲ್ಲ. ಬಾಯಿಗೆ ಒಂದು ತಪ್ಪಬಾರದು ಅಕ್ಕುವಿಗೆ ಅಂತಿದ್ರಲ್ಲ." "ಊಂ ಅದೂ ಒಂದು ಕಾಲ ಮಾರಾಯ್ತಿ." ಮನಸ್ಸು ಮತ್ತೆ ಅಂತಕ್ಕನೆಡೆಗೆ ಹೊರಳಿತು. "ಅಲ್ಲವೇ ಮಾಂಕು... ಪದವಿನ ಕಡೆಗೆ ಹೋಗಿದ್ದೀಯೇನೆ?... ಶೆಟ್ರು ಹೇಗಿದ್ದಾರೆ?" "ಎರಡು ವಾರದ ಹಿಂದೆ ಒಮ್ಮೆ ಹೋಗಿದ್ದೆ. ಬೊಂಬಾಯಿಯವರ ಸವಾರಿ ಎಲ್ಲ ಬಂದಿದೆ... ಅದು ಎಂತದೋ ಕೋರೋಣ ಬಂದಿದೆ ಅಲ್ವಾ? ಅದಕ್ಕೆ ಎಲ್ಲಾ ಊರಿಗೆ ಬಂದಿದ್ದಾರೆ. ಶೆಟ್ರು ಚಾವಡಿಯಲ್ಲಿ ಕೂತಿದ್ರು. ತುಂಬಾ ಬಚ್ಚಿದ್ದಾರೆ. ಪ್ರಾಯ ಕಾಣ್ತದೆ ಈಗ. ಜಾಸ್ತಿ ಮಾತಾಡ್ಲಿಕ್ಕೆ ಆಗ್ಲಿಲ್ಲ. ಕಿನ್ನಣ್ಣನ ಹೆಂಡತಿ ನನ್ನನ್ನು ನೋಡಿ ಮುಖ ಒಂತರಾ ಮಾಡಿ, 'ನೋಡಿ ಮಾಂಕು ಅಕ್ಕ ಈಗ ಈ ಸೀಕಿನ ಸಮಯದಲ್ಲಿ ನೀವು ಹೀಗೆ ಮನೆ, ಮನೆ ತಿರುಗುವುದು ಒಳ್ಳೆಯದಲ್ಲಾಂತ' ಮುಖಕ್ಕೆ ಹೊಡೆದ ಹಾಗೆ ಹೇಳುವುದ? ಒಂದು